**ದಿನಾಂಕಃ 25.07.2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ **5** ರಿಂದ **8** ನೇ ಪ್ರತಿ**ವಾದಿ ಪರ** ಶ್ರೀ ಬಿ ಎಮ್ ಎನ್ **ವಕೀಲರಿಂದಃ**

ಸರ್ವೆ ನಂಬರ್ 103/2 ರಲ್ಲಿ ಒಟ್ಟು 1 ಎಕರೆ 30 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ. ಸದರಿ ಒಟ್ಟು ಜಮೀನು 1 ಎಕರೆ 30 ಗುಂಟೆಗೆ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂಬರ್ 102 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 105 ರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಜಯಮ್ಮ, ನಾಗರಾಜು ಮತ್ತು ಮಂಚೇಗೌಡರ ಜಮೀನು ಬರುತ್ತದೆ. ಸರ್ವೆ ನಂಬರ್ 103/2 ರ 19 ಗುಂಟೆ ವಿಸ್ತೀರ್ಣದ ಜಮೀನಿಗೆ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂಬರ್ 102 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 105 ರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಜಯಮ್ಮ, ನಾಗರಾಜು ಮತ್ತು ಮಂಚೇಗೌಡರ ಜಮೀನು ಬರುತ್ತದೆ. ಜಯಮ್ಮ, ನಾಗರಾಜು ಮತ್ತು ಮಂಚೇಗೌಡರ ಜಮೀನಿನ ಸರ್ವೆ ನಂಬರ್ 103 ಆಗಿರುತ್ತದೆ.

ದಾವಾ 2 ನೇ ಅನುಸೂಚಿ ಸ್ವತ್ತು ಮಾದೇಗೌಡರವರ ಹೆಸರಿಗೆ ಕ್ರಯವಾಗಿರುತ್ತದೆ. ಸದರಿ ಗ್ರಾಮ ಠಾಣಾ ಜಮೀನಿನ ವಿಸ್ತೀರ್ಣ 22 ಗುಂಟೆಯಾಗಿರುತ್ತದೆ. ದಾವಾ 2 ನೇ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂಬರ್ 102 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 105 ರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಜಯಮ್ಮ, ನಾಗರಾಜು ಮತ್ತು ಮಂಚೇಗೌಡರ ಜಮೀನು ಬರುತ್ತದೆ.

ದಾವಾ 3 ನೇ ಅನುಸೂಚಿ ಸ್ವತ್ತು ಮಾದೇಗೌಡರವರ ಹೆಸರಿಗೆ ಕ್ರಯವಾಗಿರುತ್ತದೆ. ಸದರಿ ಗ್ರಾಮ ಠಾಣಾ ಜಮೀನಿನ ವಿಸ್ತೀರ್ಣ 22 ಗುಂಟೆಯಾಗಿರುತ್ತದೆ. ದಾವಾ 3 ನೇ ಅನುಸೂಚಿ ಸ್ವತ್ತಿನ ಚೆಕ್ಕು ಬಂದಿ ಪೂರ್ವಕ್ಕೆ ಸರ್ವೆ ನಂಬರ್ 102 ರ ಜಮೀನು, ಪಶ್ಚಿಮಕ್ಕೆ ಸರ್ವೆ ನಂಬರ್ 105 ರ ಜಮೀನು, ಉತ್ತರಕ್ಕೆ ಸರ್ಕಾರಿ ಓಣಿ, ದಕ್ಷಿಣಕ್ಕೆ ಜಯಮ್ಮ, ನಾಗರಾಜು ಮತ್ತು ಮಂಚೇಗೌಡರ ಜಮೀನು ಬರುತ್ತದೆ. ನಾನು ಹೇಳಿದಂತೆ ವಾರಸುದಾರಿಕೆಯಿಂದ ನನಗೆ ದಾವಾ ಅನುಸೂಚಿ ಸ್ವತ್ತುಗಳು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಈ ಮೇಲೆ ಹೇಳಿದಂತೆ ತಿಳಿಸಿದ ಚೆಕ್ಕು ಬಂದಿಯ ಒಳಗೆ ನಾನು ಹೇಳಿದ ಜಮೀನುಗಳು ಬರುವುದಿಲ್ಲ ಮತ್ತು ಸದರಿ ಜಮೀನಿನಲ್ಲಿ ನಾನು ಸ್ವಾಧೀನತೆ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

ಜಗ್ಗಜೀವನ ಗ್ರಾಮದಲ್ಲಿ 50 ಮನೆಗಳು ಇರುವ ಬಗ್ಗೆ ನಾನು ಯಾವುದೇ ದಾಖಲಾತಿ ನೀಡಿರುವುದಿಲ್ಲ. ಕಗ್ಗಲಿಪುರ, ವ್ಯಾಸರಾಜಪುರ, ಸೋಮನಾಥಪುರ ಗ್ರಾಮಗಳಲ್ಲಿ 300 ಮನೆಗಳು ಇರುವ ಬಗ್ಗೆ ನಾನು ದಾಖಲಾತಿಗಳನ್ನು ನೀಡಿರುವುದಿಲ್ಲ. ನಮ್ಮ ಕುಟುಂಬದ ಮೂರು ತಲೆಮಾರಿನ ವಂಶವೃಕ್ಷವನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ. ಮಂಚೇಗೌಡ ಯಾನೆ ಕುಪ್ಪಿಗೌಡ ಎಂಬುವವರು ನನ್ನ ತಾತ. ಸದರಿ ಮಂಚೇಗೌಡ ಯಾನೆ ಕುಪ್ಪಿ ಗೌಡರವರು ನನ್ನ ತಾತ ಎಂದು ತೋರಿಸಲು ದಾಖಲಾತಿಯನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಮಂಚೇಗೌಡ ಯಾನೆ ಕುಪ್ಪಿ ಗೌಡರವರು ಕಗ್ಗಲೀಪುರದಲ್ಲಿ ವಾಸಿಸುತ್ತಿದ್ದರು. ಸದರಿ ಮಂಚೇಗೌಡ ಯಾನೆ ಕುಪ್ಪಿ ಗೌಡರವರ ಹೆಂಡತಿಯ ಹೆಸರು ರಂಗಮ್ಮ. ಸದರಿಯವರಿಗೆ 4 ಜನ ಮಕ್ಕಳು. ಅವರೆಂದರೆ ಮಂಚೇಗೌಡ, ಮಾದೇಗೌಡ, ಸಣ್ಣೇಗೌಡ ಮತ್ತು ಸುಬ್ಬೇಗೌಡ. ಸದರಿ 4 ಜನರು ಈಗ ಮರಣ ಹೊಂದಿರುತ್ತಾರೆ. ಸದರಿಯವರ ಮಕ್ಕಳು ಜೀವಂತ ಇರುತ್ತಾರೆ. ಸದರಿಯವರಲ್ಲಿ ಮಂಚೇಗೌಡ ಎಂಬುವವರು ನನ್ನ ತಂದೆ. ನನ್ನ ತಾಯಿಯ ಹೆಸರು ಪುಟ್ಟಮ್ಮ. ನನ್ನ ತಂದೆಗೆ ನಾನು ಮತ್ತು ನನ್ನ ಸಹೋದರಿ ಇಬ್ಬರು ಮಕ್ಕಳು. ದಿನಾಂಕ 06.09.1952 ಮತ್ತು ದಿನಾಂಕ 08.09.1952 ರ ಕ್ರಯ ಪತ್ರಗಳು ಮಾದೇಗೌಡರವರ ಹೆಸರಿಗೆ ನೊಂದಣಿಯಾಗಿರುತ್ತವೆ. ಸದರಿ ಮಾದೇಗೌಡರವರು ನನ್ನ ಚಿಕ್ಕಪ್ಪ. ಸದರಿ ಮಾದೇಗೌಡರವರ ಹೆಂಡತಿಯ ಹೆಸರು ಸಿದ್ದಮ್ಮ. ಸದರಿ ಮಾದೇಗೌಡರವರಿಗೆ 4 ಜನ ಹೆಣ್ಣು ಮಕ್ಕಳು ಮತ್ತು 2 ಗಂಡು ಮಕ್ಕಳು. ಸದರಿಯವರು ಜೀವಂತ ಇರುತ್ತಾರೆ. ಮಂಚೇಗೌಡ ಯಾನೆ ಕುಪ್ಪಿ ಗೌಡರವರ ಎಲ್ಲಾ ಮಕ್ಕಳ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ನಿಪಿ-18 ರಲ್ಲಿ ನಮೂದಾಗಿರುವ ಮಂಚೇಗೌಡ ಯಾನೆ ಕುಪ್ಪಿ ಗೌಡ ಎಂಬುವವರು ನನ್ನ ತಾತ. ನಿಪಿ-19 ರಲ್ಲಿ ನಮೂದಾಗಿರುವ ಮಾದೇಗೌಡ ಬಿನ್ ಮಂಚೇಗೌಡ ಎಂಬುವವರು ನನ್ನ ಚಿಕ್ಕಪ್ಪ. ನಿಪಿ-18 ರ ದಾಖಲಾತಿಯಂತೆ 22 ಗುಂಟೆ ಜಮೀನು ಖರೀದಿಯಾಗಿರುತ್ತದೆ. ಸದರಿ 22 ಗುಂಟೆ ಜಮೀನು 1952 ರಲ್ಲಿ ನಳ್ಳಮಾದಮ್ಮರವರ ಹೆಸರಿನಲ್ಲಿ ಖಾತೆ ಇತ್ತು. 1952 ರಲ್ಲಿ 22 ಗುಂಟೆ ಜಮೀನು ನಳ್ಳಮಾದಮ್ಮರವರ

ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ 22 ಗುಂಟೆ ಗ್ರಾಮಠಾಣಾ ಖಾತೆಯು ನನ್ನ ಚಿಕ್ಕಪ್ಪನ ಹೆಸರಿನಲ್ಲಿ ಇರುತ್ತದೆ. ಗ್ರಾಮಠಾಣಾ ವ್ಯಾಪ್ತಿಗೆ ಬರುವ ಆಸ್ತಿಗಳು ಸೋಮನಾಥಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ.

ನಿಪಿ-19ರ ಕ್ರಯ ಪತ್ರದಂತೆ ನನ್ನ ಚಿಕ್ಕಪ್ಪ ಮಾದೇಗೌಡನ ಹೆಸರಿಗೆ 22 ಗುಂಟೆ ಜಮೀನು ಕ್ರಯವಾಗಿರುತ್ತದೆ. ಸದರಿ 22 ಗುಂಟೆ ಜಮೀನು 1952ರಲ್ಲಿ ನಳ್ಳಮಾದಮ್ಮರವರ ಹೆಸರಿನಲ್ಲಿ ಖಾತೆ ಇತ್ತು. 1952ರಲ್ಲಿ 22 ಗುಂಟೆ ಜಮೀನು ನಳ್ಳಮಾದಮ್ಮರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ನಾನು ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ 22 ಗುಂಟೆ ಗ್ರಾಮಠಾಣಾ ಖಾತೆಯು ನನ್ನ ಚಿಕ್ಕಪ್ಪ ಮಾದೇಗೌಡರವರ ಹೆಸರಿನಲ್ಲಿ ಇರುತ್ತದೆ. ಗ್ರಾಮಠಾಣಾ ವ್ಯಾಪ್ತಿಗೆ ಬರುವ ಆಸ್ತಿಗಳು ಸೋಮನಾಥಪುರ ಗ್ರಾಮ ಪಂಚಾಯತಿಯ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ.

ದಾವಾ ಅನುಸೂಚಿ ಸ್ವತ್ತಿಗೆ ಸಂಬಂದಿಸಿದಂತೆ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿರುತ್ತೇನೆ. ಮಂಚೇಗೌಡ ಬಿನ್ ನಿಂಗೇಗೌಡ ಯಾನೆ ಸಣ್ಣೇಗೌಡ ಎಂದರೆ ನನ್ನ 3 ನೇ ಚಿಕ್ಕಪ್ಪ. ಎಮ್ ಮಹದೇವ್ ಬಿನ್ ಮಾದೇಗೌಡ ಎಂಬುವವರು ನನ್ನ ಚಿಕ್ಕಪ್ಪನ ಮಗ. ನಾನು ಸಲ್ಲಿಸಿರುವ ದಾಖಲಾತಿಗಳ ಪ್ರಕಾರ ದಾವಾ ಅನುಸೂಚಿ ಸ್ವತ್ತಿನ ಖಾತೆಗಳು ನನ್ನ ಹೆಸರಿನಲ್ಲಿ ಇರುವುದಿಲ್ಲ. ನಾನು ದಾವಾ ಅನುಸೂಚಿ ಸ್ವತ್ತುಗಳ ಸ್ವಾಧೀನತೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಅನುಸೂಚಿ ಸ್ವತ್ತುಗಳ ಸ್ವಾಧೀನತೆಯಲ್ಲಿ ನಾನು ಇರುತ್ತೇನೆ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ಸ್ವಾಧೀನತೆ ಹೊಂದಿದ್ದೇನೆ ಎಂದು ತೋರಿಸಲು ಪ್ರತ್ಯೇಕ ದಾಖಲಾತಿಗಳನ್ನು ಹಾಜರು ಪಡಿಸಿರುವುದಿಲ್ಲ. ಎಮ್ ಮಹದೇವ ಮತ್ತು ಮಂಚೇಗೌಡ ಎಂಬುವವರ ಹೆಸರಿನಲ್ಲಿ ಪಹಣಿ ಪತ್ರಿಕೆಗಳು ಇರುವ ಆಸ್ತಿಗಳಲ್ಲಿ ಸದರಿಯವರೇ ಸ್ವಾಧೀನತೆ ಹೊಂದಿರುತ್ತಾರೆ. ದಾವಾ ಅನುಸೂಚಿ ಸ್ವತ್ತುಗಳಲ್ಲಿ ನಾನು ಸ್ವಾಧೀನತೆ ಹೊಂದಿಲ್ಲದೇ ಇದ್ದರೂ ಸಹ ಸುಳ್ಳು ದಾವೆಯನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಪಿ-2 ರಂತೆ ಸೋಮನಾಥಪುರ ಗ್ರಾಮ ಪಂಚಾಯತಿಯವರು ನನಗೆ ತಿಳುವಳಿಕೆ ಪತ್ರ ನೀಡಿದ್ದರು ಎಂದರೆ ಸರಿ. ಸದರಿ ನಿಪಿ-2 ರ ನೋಟೀಸಿನ ದಿನಾಂಕದಂದು ದಾವಾ ಅನುಸೂಚಿ ಸ್ವತ್ತುಗಳ ಖಾತೆಯು ನನ್ನ ಹೆಸರಿನಲ್ಲಿ ಇರಲಿಲ್ಲ. ಜಗ್ಗಜೀವನ ಗ್ರಾಮದ ಗ್ರಾಮಸ್ಥರು ಸೋಮನಾಥಪುರ ಗ್ರಾಮ ಪಂಚಾಯತಿಯಿಂದ ಮಂಜೂರಾದ 25 ಗುಂಟೆ ಜಾಗದಲ್ಲಿ ಹೆಣಗಳನ್ನು ಹೂಳುತ್ತಿದ್ದಾರೆ ಎಂದರೆ ಸರಿಯಲ್ಲ. ಸೋಮನಾಥಪುರ ಗ್ರಾಮ ಪಂಚಾಯತಿಯವರು ಜಗ್ಗಜೀವನ ಗ್ರಾಮದ ಗ್ರಾಮಸ್ಥರಿಗೆ ಮಂಜೂರು ಮಾಡಿರುವ 25 ಗುಂಟೆ ಸ್ಮಶಾನದ ಜಾಗದ ಆದೇಶವನ್ನು ನಾನು ಪ್ರಶ್ನೆ ಮಾಡಿರುವುದಿಲ್ಲ. ಸರ್ವೆ ನಂಬರ್ 102/1 ಎ, 106/2 ಬಿ ಜಮೀನುಗಳಿಗೆ ನಾನು ದಾವೆ ಸಲ್ಲಿಸಿರುವುದಿಲ್ಲ. ಗ್ರಾಮ ಠಾಣಾ ವ್ಯಾಪ್ತಿಯ ಆಸ್ತಿಗಳ ಖಾತೆಯು ನನ್ನ ಹೆಸರಿನಲ್ಲಿ ಇರುವುದಿಲ್ಲ. ಕಾನೂನು ಬದ್ದವಾಗಿ ಸ್ಮಶಾನದ ಉದ್ದೇಶಕ್ಕಾಗಿ ಮಂಜೂರಾಗಿರುವ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಇನ್ನುಳಿದಂತೆ 1 ರಿಂದ 3 ನೇ ಪ್ರತಿವಾದಿಗಳ ಪರ ವಕೀಲರು ಮಾಡಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳುತ್ತೇವೆ)

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

ಹೆಚ್ಚುವರಿ ಸಿವಿಲ್ ಮತ್ತು ಜೆ ಎಮ್ ಎಫ್ ಸಿ
ನ್ಯಾಯಾಧೀಶರು, ತಿ.ನರಸಿಪುರ